ದಿನಾಂಕ:11.06.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ -

ನಾನು ಎಸ್ ಎಸ್ ಎಲ್ ಸಿ ಮತ್ತು ಐಟಿಐ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲಿಷ್ ಓದಲು ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತು ನನ್ನ ಅಣ್ಣ ಹೇಳಿ ಬರೆಸಿರುತ್ತಾರೆ.

ಸರ್ವೇ ನಂಬರ್ 166 ಸುಮಾರು 5 ಪೋಡಿಯಾಗಿದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 166 ಸಾತನೂರಿನಲ್ಲಿ ಇದೆ ಎಂದರೆ ಸರಿ. ಸರ್ವೇ ನಂಬರ್ 166/2 ಮೂಲತಃ ವೆಂಕಟಯ್ಯನವರಿಗೆ ಸೇರಿತ್ತು ಎಂದರೆ ಸರಿ. ಸರ್ವೇ ನಂಬರ್ 166/2 ವೆಂಕಟಯ್ಯನವರ ತೀರಿಕೊಂಡ ನಂತರ ಅವರ ಮಗ ಕಾಳಯ್ಯನವರ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದು ನಿಪಿ-2ನ್ನು ತೋರಿಸಿ ಕೇಳಿದಾಗ ಸಾಕ್ಷಿದಾರರು ಹೌದು ಎಂದು ನುಡಿಯುತ್ತಾರೆ, ಮುಂದುವರೆದು ಅದು ಸುಳ್ಳು ದಾಖಲೆ ಎಂದು ನುಡಿಯುತ್ತಾರೆ. ಕಾಳಯ್ಯನವರು ಮರಣ ನಂತರ ವಾದಿ ನಾಗರಾಜುರವರ ಹೆಸರಿಗೆ ಸರ್ವೇ ನಂಬರ್ 166/2ರ ಖಾತೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ವಾದಿ ಹೆಸರಿಗೆ ಖಾತೆ ದಾಖಲಾದ ನಂತರ ಅವರೇ 1 ಗುಂಟೆ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿದಾರರು ಅಲ್ಲಿ ಜಮೀನು ಇರುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 166/2 ರ ಚಕ್ಕಂದಿ ಪಶ್ಚಿಮಕ್ಕೆ ನಮ್ಮ ತಂದೆ ಗುರುಸಿದ್ದಯ್ಯನವರ ಸ್ವತ್ತು ಇದೆ ಎಂದರೆ ಸರಿಯಲ್ಲ. ನಿಮ್ಮ ಸ್ವತ್ತಿನ ಸರ್ವೇ ನಂಬರ್ ಎಷ್ಟು ಎಂಬ ಪ್ರಶ್ನೆಗೆ ಸಾಕ್ಷಿದಾರರು ಸರ್ವೇ ನಂಬರ್ 166/2 ಎಂದು ನುಡಿಯುತ್ತಾರೆ. ಸರ್ವೇ ನಂಬರ್ 166/2 ಸ್ವತ್ತಿಗೆ ಪೋಜಣಿಗಾಗಿ ವಾದಿ ರವರ ಅರ್ಜಿ ಕೊಟ್ಟ ನಂತರ ಪೋಜಣಿ ಮಾಡಿ ವಾದಿ ಹೆಸರಿಗೆ ಖಾತೆ ನೀಡಲಾಗಿದೆ ಎಂದರೆ ಸರಿಯಲ್ಲ. ಒಂದು ವೇಳೆ ಅಲ್ಲಿ ಯಾವುದೇ ಜಮೀನು ಇಲ್ಲದಿದ್ದರು ಪೋಜಣಿ ಇಲಾಖೆಯವರು ಆ ರೀತಿ ವರದಿ ನೀಡುತ್ತಿದ್ದರು ಎಂದರೆ ಸರಿಯಲ್ಲ. ವಾದಿ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಜಾಗಕ್ಕೆ ನೀವು ತೊಂದರೆ ಕೊಟ್ಟ ಕಾರಣ ದಿನಾಂಕ 10.11.2021ರಲ್ಲಿ ಸಾತನೂರು ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ಸರಿ. ಪದೇ ಪದೇ ಜಾಗಕ್ಕೆ ನೀವು ತೊಂದರೆ ಕೊಟ್ಟ ಕಾರಣ ಪೊಲೀಸರು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ವಾದಿಗೆ ಹೇಳಿದ್ದರು ಎಂದರೆ ಸರಿಯಲ್ಲ.

ಸರ್ವೇ ನಂಬರ್ 166/5ರಲ್ಲಿ 23 ಗುಂಟೆ ಸ್ವತ್ತು ವಾದಿ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 166/5ಕ್ಕೆ ಯಾರು ತೊಂದರೆ ಕೊಡುತ್ತಿಲ್ಲ ಆದರೆ ಸರ್ವೇ ನಂಬರ್ 166/2ಕ್ಕೆ ನೀವು ತೊಂದರೆ ಕೊಡುತ್ತಿದ್ದೀರಾ ಎಂದರೆ ಸಾಕ್ಷಿದಾರರು ಅದು ನಮಗೆ

ಸೇರಿದ ಸ್ವತ್ತು ಎಂದು ನುಡಿಯುತ್ತಾರೆ. ಸರ್ವೇ ನಂಬರ್ 166/1 ರಿಂದ 3 ಸೈಟು ಆದಂತಹ ಜಾಗಗಳು ಎಂದರೆ ಸರಿ. ಸರ್ವೇ ನಂಬರ್ 166/2 ವಾದಿಯೇ ಸ್ವಾಧೀನದಲ್ಲಿ ಇದ್ದರೂ ಸಹ ಅಲ್ಲಿ ಜಮೀನು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೇ ನಂಬರ್ 166/1ರ ಚಕ್ಕೆಂದಿ ಗೊತ್ತ ಎಂದರೆ ಸಾಕ್ಷಿ ಅದು ನಮ್ಮ ಸ್ವತ್ತಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 166/2 ನಮ್ಮ ಜಮೀನು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಕ್ರಯ ಪತ್ರ ನೀಡಿರುವುದಾಗಿ ನುಡಿಯುತ್ತಾರೆ. ನೀವು ಹಾಜರುಪಡಿಸಿರುವ ದಾಖಲೆ ಗ್ರಾಮ ಠಾಣಾದಲ್ಲಿ ಇದೆ ಎಂದರೆ ಸರಿ. ನಿಮ್ಮ ಸ್ವತ್ತಿನ ಚಕ್ಬಂದಿ ಹೇಳಿ ಎಂದರೆ ಸಾಕ್ಷಿದಾರರು ಪಶ್ಚಿಮಕ್ಕೆ ದಾರಿ, ಪೂರ್ವಕ್ಕೆ ಬೋರೆಗೌಡನದೊಡ್ಡಿರವರ ಜಮೀನು, ಉತ್ತರಕ್ಕೆ ಕೆಂಚಯ್ಯನ ಮಗ ಚಿಕ್ಕಯ್ಯನವರ ಜಮೀನು ಮತ್ತು ದಕ್ಷಿಣಕ್ಕೆ ದಾರಿ ಇದೆ. ಸಾಕ್ಷಿದಾರರು ಪೂರ್ವಕ್ಕೆ ಮಾದೇವಸ್ವಾಮಿ ಜಮೀನು ಇದೆ ಎಂದು ನುಡಿಯುತ್ತಾರೆ. ವಾದಿಯ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಸದರಿ ಜಾಗ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿರವರು ಬೆಂಗಳೂರಿನಲ್ಲಿ ವಾಸವಿರುವ ಕಾರಣ ಅದನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಕನಕಪುರ